**ಪಿ.ಡಬ್ಲ್ಯೂ.1**

**ಸಾಕ್ಷಿಗೆ ದಿನಾಂಕ : 17-04-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು : ಶ್ರೀಮತಿ.ಎಸ್.ಬಿ.ಪಿ ವಕೀಲರಿಂದ ಆರೋಪಿ ಪರವಾಗಿ**

1. 2023 ರಿಂದ 2024 ರವರೆಗಿನ ಉಳಿತಾಯ ಖಾತಾ ಉತಾರೆ ಹಾಜರಪಡಿಸಿದ್ದೇನೆ. ಸದರಿ ನಿಮ್ಮ ಉಳಿತಾಯ ಖಾತೆಗೆ ನಿಪಿ-7 ರ ಪ್ರಕಾರ ದಿಃ01.07.2023 ರಂದು ಆರೋಪಿತಳು ರೂ.10,000/-, ದಿಃ06.07.2023 ರಂದು ರೂ.1,160/-, ದಿಃ08.07.2023 ರಂದು ರೂ.4,160/- ರೂಪಾಯಿ, ದಿಃ20.07.2023 ರಂದು ರೂ.1,160/-, ಅದೇ ದಿನ ರೂ.10,000/-, , ದಿಃ22.07.2023 ರಂದು ರೂ.2,000/- ರೂಪಾಯಿ, ಅದೇ ದಿನ ರೂ.3,000/- ಸಾವಿರ ರೂಪಾಯಿ, ಅದೇ ದಿನ ರೂ.80/- ರೂಪಾಯಿ, ದಿಃ29.07.2023 ರಂದು ರೂ.6,000/- ಸಾವಿರ ರೂಪಾಯಿ, ದಿಃ05.08.2023 ರಂದು ರೂ.2,000/- ರೂಪಾಯಿ, ದಿಃ27.08.2023 ರಂದು ರೂ.10,000/-, ದಿಃ01.10.2023 ರಂದು ರೂ.5,800/-, ದಿಃ30.10.2023 ರಂದು ರೂ.14,800/-, ದಿಃ11.11.2023 ರಂದು ರೂ.10,000/- ರಂತೆ ಒಟ್ಟು ರೂ.80,160/- ಗಳನ್ನು ವರ್ಗಾವಣೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ಬೇರೆ ವ್ಯವಹಾರಕ್ಕೆ ಸಂಬಂಧಿಸಿದ್ದು, ಈ ವ್ಯವಹಾರಕ್ಕೆ ಸಂಬಂಧಿಸಿದ್ದಲ್ಲ ಎಂದು ಹೇಳುತ್ತಾರೆ.

2. ದಿಃ07.10.2023 ರಂದು ರೂ.4,960/-, ಅದೇ ದಿನ ರೂ.1,600/-, ಅದೇ ದಿನ ರೂ.400/-, ದಿಃ08.12.2023 ರಂದು ರೂ.360/-, ದಿಃ13.12.2023 ರಂದು ರೂ.3,000/-, ದಿಃ26.12.2023 ರಂದು ರೂ.1,000/-, ದಿಃ08.01.2024 ರಂದು ರೂ.4,960/-, ದಿಃ18.01.2024 ರಂದು ರೂ.2,000/-, ದಿಃ22.01.2024 ರಂದು ರೂ.800/-, ದಿಃ11.02.2024 ರಂದು ರೂ.5,000/-, ದಿಃ21.02.2024 ರಂದು ರೂ.4,960/-, ದಿಃ04.03.2024 ರಂದು ರೂ.5,000/-, ದಿಃ24.03.2024 ರಂದು ರೂ.16,000/-, ದಿಃ27.03.2024 ರಂದು ರೂ.20,000/-, ದಿಃ30.03.2024 ರಂದು ರೂ.4,960/- ಒಟ್ಟು ರೂ.75,000/- ಗಳನ್ನು ನಿಮ್ಮ ಉಳಿತಾಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ಬೇರೆ ವ್ಯವಹಾರಕ್ಕೆ ಸಂಬಂಧಿಸಿದ್ದು, ಈ ವ್ಯವಹಾರಕ್ಕೆ ಸಂಬಂಧಿಸಿದ್ದಲ್ಲ ಎಂದು ಹೇಳುತ್ತಾರೆ.

3. ದಿಃ12.04.2024 ರಂದು ರೂ.2,000/-, ದಿಃ13.04.2024 ರಂದು ರೂ.2,480/-, ದಿಃ20.04.2024 ರಂದು ರೂ.2,480/-, ಅದೇ ದಿನ ರೂ.1,240/-, ದಿಃ27.04.2024 ರಂದು ರೂ.2,480/-, ಅದೇ ದಿನ ರೂ.2,140/-, ದಿಃ04.05.2024 ರಂದು ರೂ.1,240/-,

ದಿ:20.05.2024 ರಂದು ರೂ.10,000/-, ಅದೇ ದಿನ ರೂ.1,280/-, ದಿ:11.06.2024 ರಂದು ರೂ.10,520/-, ದಿ:18.11.2024 ರಂದು ರೂ.2,500/- ಈ ರೀತಿ ಒಟ್ಟು ರೂ.38,360/- ರೂಪಾಯಿಗಳನ್ನು ಗಳನ್ನು ನಿಮ್ಮ ಉಳಿತಾಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ಬೇರೆ ವ್ಯವಹಾರಕ್ಕೆ ಸಂಬಂಧಿಸಿದ್ದು, ಈ ವ್ಯವಹಾರಕ್ಕೆ ಸಂಬಂಧಿಸಿದ್ದಲ್ಲ ಎಂದು ಹೇಳುತ್ತಾರೆ.

4. ನಿಮಗೆ ಆ ರೀತಿ ಮೊತ್ತ ನೀಡಿದ ನಂತರ ಆರೋಪಿತಳು ನಿಮಗೆ ಕರೆ ಮಾಡಿ ನಿಮಗೆ ಬರತಕ್ಕ ಎಲ್ಲಾ ಮೊತ್ತ ನೀಡಿದ್ದಾರೆ ಎಂದು ಹೇಳಿದಾಗ ನೀವು ಆರೋಪಿತಳಿಗೆ ಇನ್ನೂ 3 ಕಂತುಗಳು ಮಾತ್ರ ಕೊಡುವುದು ಇದೆ ಎಂದು, ಆ ರೀತಿ ಹಣ ಇವತ್ತೆ ನೀಡದಿದ್ದರೆ ಆಕೆಯ ಮೇಲೆ 5 ರಿಂದ 6 ಲಕ್ಷ ರೂಪಾಯಿ ಚೆಕ ಬೌನ್ಸ ಪ್ರಕರಣ ಸಲ್ಲಿಸುತ್ತೇನೆ ಎಂದು ನಿಮ್ಮ ಬಳಿ ಇನ್ನೂ 2 ಚೆಕಗಳು ಇವೆ ಎಂದು ಆಕೆಗೆ ದೂರವಾಣಿ ಮುಖಾಂತರ ಹೇಳಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ದೂರನಲ್ಲಿ ಆಗಲೀ ಅಥವಾ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿಯಾಗಲೀ, ನಿಮ್ಮ ಪ್ರಕಾರ ಆರೋಪಿತಳೊಂದಿಗೆ ಬೇರೆ ವ್ಯವಹಾರಗಳು ಇದ್ದವು ಎಂದು ಹೇಳಿ ಬರೆಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಪ್ರಕಾರ ಬೇರೆ ಯಾವ ವ್ಯವಹಾರಕ್ಕೆ ಸಂಬಂಧಿಸಿದಂತೆ ಸದರಿ ಮೊತ್ತ ಇದೆ ಎಂದರೆ ನಾನು ಪಾರ್ಲರ ನಡೆಸುತ್ತಿದ್ದು, ನನ್ನ ಬಳಿ ಆರೋಪಿತಳು ಗ್ರಾಹಕಳಾಗಿ ಬಂದಾಗ ಮತ್ತು ಗ್ರಾಹಕರನ್ನು ತೆಗೆದುಕೊಂಡು ಬಂದಾಗ ಆಕೆಗೆ ನಗದು ರೂಪದಲ್ಲಿ ನೀಡಿದ ಮೊತ್ತವನ್ನು ನನಗೆ ಫೋನ ಪೇ ಮೂಲಕ ನೀಡಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ಆರೋಪಿತಳು ನಿಮ್ಮ ಬಳಿ ಗ್ರಾಹಕರನ್ನು ಕರೆದುಕೊಂಡು ಬರುವ ಕೆಲಸ ಮಾಡುತ್ತಾರೆಯೇ ಎಂದರೆ ಆ ರೀತಿ ಇಲ್ಲ, ಪರಿಚಯಸ್ಥರನ್ನು ಕರೆದುಕೊಂಡು ಬರುತ್ತಾರೆ ಎಂದು ಹೇಳುತ್ತಾರೆ. ಯಾವ ದಿನಾಂಕದಂದು ಯಾರನ್ನು ಕರೆದುಕೊಂಡು ಬಂದರು ಎಂದು ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

5. ನಿಪಿ-6 ಪತ್ರ ಬರಹಗಾರರೊಂದಿಗೆ ಸಾಕಷ್ಟು ಹಣ ಕೊಡುವ ಮತ್ತು ತೆಗೆದಕೊಳ್ಳುವ ವ್ಯವಹಾರ ಇದೆ ಎಂದರೆ ಸರಿ. ನೀವು ಹಾಜರಪಡಿಸಿದ ನಿಪಿ-7 ಖಾತಾ ಉತಾರೆಯಲ್ಲಿ ಅಂದಾಜು 20 ರಿಂದ 25 ಬಾರಿ ಹಣ ವರ್ಗಾವಣೆ ನಿಮ್ಮ ಖಾತೆಯಿಂದ ನಿಮ್ಮ ಖಾತೆಗೆ, ಅವರ ಖಾತೆಯಿಂದ ನಿಮ್ಮ ಖಾತೆಗೆ ಹಣ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿಯು ಅದಕ್ಕಿಂತ ಹೆಚ್ಚಿನ ಬಾರಿ ಹಣ ವರ್ಗಾವಣೆ ಆಗಿರಬಹುದು ಎಂದು ಹೇಳುತ್ತಾರೆ. ನೀವು ಪತ್ರಹಾರರಾದ ಚಂದ್ರಶೇಖರ ಕುಳಲಿ ಅವರೊಂದಿಗೆ ಮಿಲಾಪಿಯಾಗಿ ನಿಮ್ಮ ಸಂಘದ ಹಣ ಪಡೆಯುವ ಮಹಿಳೆಯರಿಂದ ಕಡ್ಡಾಯವಾಗಿ

**ಪಿ.ಡಬ್ಲ್ಯೂ.1**

2 ಚೆಕ ಮತ್ತು ಕೈಗಡ ಪತ್ರ ಬರೆಸಿಕೊಳ್ಳುತ್ತೀರಿ ಎಂದರೆ ಸರಿಯಲ್ಲ. ಆ ಕಾರಣದಿಂದ ನೀವು ಸಲ್ಲಿಸಿದ ಎಲ್ಲಾ ಚೆಕ ಬೌನ್ಸ ಪ್ರಕರಣಗಳಲ್ಲಿ ಕೈಗಡ ಪತ್ರಕ್ಕೆ ಚಂದ್ರಶೇಖರ ಕುಳಲಿ ಅವರೇ ಪತ್ರ ಬರಹಗಾರರಾಗಿದ್ದಾರೆ ಎಂದರೆ ಅವರು ಪರಿಚಯಸ್ಥರಾದ ಕಾರಣ ಅವರ ಬಳಿ ಹೋಗುತ್ತೇನೆ ಎಂದು ಹೇಳುತ್ತಾರೆ. ಆರೋಪಿತಳು ನಿಮಗೆ ಕೊಡತಕ್ಕ ಹಣವನ್ನು ಬಡ್ಡಿ ಸಮೇತ ಹಿಂದಿರುಗಿಸಿದ್ದರು ಸಹ ನೀವು ಆರೋಪಿತಳಿಂದ ಪಡೆದ 2 ಖಾಲಿ ಚೆಕಗಳನ್ನು ಮತ್ತು ಖಾಲಿ ಬಾಂಡ್ ಪೇಪರನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಆದ್ದರಿಂದ ಪ್ರಕರಣ ವಜಾಗೊಳ್ಳಲು ಯೋಗ್ಯ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ